| | | | |
|---|---|---|---|
| <?xml version="1.0" ?> | | | |
| <?xml-stylesheet type="text/css" href="home.css"?> | | | |
| <Doc id="kan-w-media- | K-1643 | " | lang="kannada"> |
| <Header type="text"> | | | |
| <encodingDesc> | | | |
| <projectDesc> | CIIL-Kannada Corpora, Monolingual Written Text | | </projectDesc> |
| <samplingDesc> | Simple written text only has been transcribed. Diagrams, pictures and tables have been omitted. Samples taken from page 2,3,6,7,14,15,18,19,22,23,,26,27,30,31,34,35, 40,41,44,45 | | </samplingDesc> |
| </encodingDesc> | | | |
| <sourceDesc><br><biblStruct><br><source> | | | |
| | <category> | Aesthetics | </category> |
| | <subcategory> | Literature-Story | </subcategory> |
| | <text> | Book | </text> |
| | <title> | turtu paristhitiya karaaLa mukha | </title> |
| | <vol> | | </vol> |
| | <issue> | | </issue> |
| </source> | | | |
| <textDes> | | | |
| | <type> | | </type> |
| | <headline> | turtu paristhitiya karaaLa mukha | </headline> |
| | <author> | Echar Variyar | </author> |
| | <words> | 1982 | </words> |
| </textDes> | | | |
| <imprint> | | | |
| | <pubPlace> | India- Mangalore | </pubPlace> |
| | <publisher> | Chandragiri Prakashana | </publisher> |
| | <pubDate> | 2007 | </pubDate> |
| </imprint> | | | |
| <idno type="CIIL code"> | | G.I.A-25 | </idno> |
| <index> | | K-1643 | </index> |
| </biblStruct><br></sourceDesc> | | | |
| <profileDesc><br><creation> | | | |
| | <date> | 08-Sep-2008 | </date> |
| | <inputter> | Shobha J | </inputter> |
| | <proof> | | </proof> |
| </creation> | | | |
| <langUsage> | | Kannada | </langUsage> |
| <wsdUsage> | | | |
| <writingSystem id="ISO/IEC 10646">Universal Multiple-Octet Coded Character Set (UCS).<br></writingSystem> | | | |
| </wsdUsage> | | | |
| <textClass> | | | |
| <channel mode="w"> | | print | </channel> |
| <domain type="public"> | | | </domain> |
| </textClass><br></profileDesc><br></Header> | | | |

| | | |
|---|---|---|
| <text><body> | | |
| <p> | ಮನಮೋಹನ ಅರಮನೆಯ ಅಂಗಳದ ಬಿಸಿಲಲ್ಲಿ ನನ್ನ ಕಣ್ಣುಗಳು ಹಳದಿಯಾದುವು. ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಸುತ್ತಿರುವ ನನ್ನ ಹಳೆಯ ವಿದ್ಯಾರ್ಥಿ ಸುರೇಂದ್ರನ ಕೈಗಳು ನನ್ನನ್ನು ಬಿಗಿದಪ್ಪಿಕೊಂಡವು. ನಿರೀಕ್ಷೆಯ ಕೊನೆಯ ಎಳೆ ಕೂಡಾ ಕಡಿಯುತ್ತಿದೆಯೇ? | </p> |
| <p> | 1976 ಫೆಬ್ರವರಿ ದಿನಾಂಕ 24 ರಂದು ನಾನು ನನ್ನ ಮಗ ರಾಜನನ್ನು ಕೊನೆಯ ಬಾರಿಗೆ ನೋಡಿದೆ. ಆತನಾಗ ಕೋಝಿಕೋಡಿನಿಂ 13 ಕಿ. ಮೀ. ದೂರವಿರುವ ಚಾತಮಂಗಲದ ರೀಜಿನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೊನೆಯ ವರ್ಷದ ವಿದ್ಯಾರ್ಥಿಯಾಗಿದ್ದನು. ನಾನು ಕೋಝಿಕೋಡ್ ಸರಕಾರೀ ಆರ್ಟ್ಸ್ ಕಾಲೇಜಿನಲ್ಲಿ ಹಿಂದಿ ಪ್ರೊಫೆಸರ್ ಆಗಿದ್ದೆ. ಮುದಲಕ್ಕೊಳದ ಬಳಿ ಇರುವ ಜನರಲ್ ಆಸ್ಪತ್ರೆಯ ಎದುರುಭಾಗದಲ್ಲಿರುವ ಕೇರಳ ಭವನ ಲಾಡ್ಜ್ ನಲ್ಲಿ ನಾನು ವಾಸಿಸುತ್ತಿದ್ದೆ. ರಾಜನು ಆಗಾಗ ಬಂದು ನನ್ನನ್ನು ಭೇಟಿಯಾಗುತ್ತಿದ್ದನು. ಸ್ವಲ್ಪ ಹಣ ತೆಗೆದುಕೊಳ್ಳಲು ಆತನು ಕೊನೆಯ ಬಾರಿ ಬಂದಿದ್ದನು. ಫೆಬ್ರವರಿ ದಿನಾಂಕ 26 ರಂದು ರಾತ್ರಿ 7 ಗಂಟೆಗೆ ನಾನು ಅವನನ್ನು ಬೀಳ್ಕೊಂಡೆ. ಪರೀಕ್ಷೆ ತಯಾರಿಯ ರಜೆ ದೊರೆತಾಗ ಊರಿಗೆ ಬರಬೇಕೆಂದು ಹೇಳಿದ್ದಕ್ಕೆ ತಲೆಯಾಡಿಸಿ ಹೊರಟು ಹೋದನು. ಚೇರ್ಪಿನ ತಿರುವಳ್ಳಕ್ಕಾವು ವಾರಿಯತ್ತಿನಲ್ಲಿ ನನ್ನ ಜನನವಾಗಿತ್ತು. ಮನೆತನದ ಆಸ್ತಿ, ಪಾಲಾದ ಬಳಿಕ ಎರ್ಣಾಕುಳಂನ ಪರಂಬಿತ್ತರ ರಸ್ತೆಯಲ್ಲಿ ಸೌಹಾರ್ದ ನಿಲಯವೆಂಬ ಹೆಸರಿನ ಮನೆ ಕಟ್ಟಿಸಿ ಅಲ್ಲಿರತೊಡಗಿದೆ. ನನ್ನ ಹೆಂಡತಿ ರಾಧಾ ವಾರಸ್ಯಾರ್ ಮತ್ತು ನನ್ನ ಮೂರು ಮಕ್ಕಳಲ್ಲದೆ ನನ್ನ ಸಹೋದರಿ ಕೊಚ್ಚಮ್ಮಿಣಿ ವಾರಸ್ಯಾರ್, ಆಕೆಯ ಗಂಡ, ರೈಲ್ವೆಯಲ್ಲಿ ಉದ್ಯೋಗದಲ್ಲಿರುವ ರಾಧಾಳ ಸಹೋದರ ಅಚ್ಯುತವಾರಿಯರ್ ಇವರೆಲ್ಲರೂ ನಮ್ಮೊಡನಿದ್ದರು. | </p> |
| <p> | 1976 ಮಾರ್ಚ್ ದಿನಾಂಕ 1 ರಂದು ಸೋಮವಾರ ನಾನು ಕಾಲೇಜು ತಲುಪಿದಾಗಲಷ್ಟೆ ರಾಜನನ್ನು ಪೋಲೀಸರು ಹಿಡಿದುಕೊಂಡು ಹೋದ ವಿವರ ನನಗೆ ಲಭಿಸಿತು. ಈಗ ಡಿ.ಆರ್. ಡಿ.ಯಲ್ಲಿ ಎಂಜಿನಿಯರ್ ಆಗಿರುವ, ರಾಜನ ಸ್ನೇಹಿತ ಕರ್ಮ ಚಂದ್ರನೆಂಬುವನು ನನ್ನನ್ನು ಕರೆದು ವಿಷಯ ತಿಳಿಸಿದನು. ಆಗ ಸಮಯ 10 ಗಂಟೆಯಾಗಿರಲಿಲ್ಲ. ಪ್ರಿನ್ಸಿಪಾಲರ ಅನುಮತಿ ಪಡೆದು ನಾನು ಚಾತ್ತಮಂಗಲಕ್ಕೆ ಹೊರಟೆ. | </p> |
| <p> | ಕಾಲೇಜು ಪರಿಸರ ಸ್ಮಶಾನಸದೃಶವಾಗಿತ್ತು. 29ರ ಬೆಳಿಗ್ಗೆ ರಾಜನನ್ನು ಬಂಧಿಸಲಾಗಿತ್ತು. ಅದರ ಹಿಂದಿನ ದಿನ ಪಾರೂಕ್ ಕಾಲೇಜಿನ ಉತ್ಸವದಲ್ಲಿ ಭಾಗವಹಿಸಿ ಬೆಳಿಗ್ಗೆ ಹಾಸ್ಟೆಲಿನ ಮುಂದುಗಡೆ ಬಸ್ಸಿನಿಂದ ಇಳಿಯುತ್ತಿದ್ದಾಗ ಆತನನ್ನು ಬಂಧಿಸಲಾಗಿತ್ತು. ಆತನನ್ನು ಕೋಝಿಕೋಡಿಗೆ ಕರೆದೊಯ್ದು, ಬಳಿಕ ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣದ ಅನ್ವೇಷಣೆಗಾಗಿ ಸ್ಥಾಪಿತವಾದ ಕಕ್ಕಯಂ ಕ್ಯಾಂಪಿಗೆ ಕರೆದೊಯ್ದರೆಂದು ತಿಳಿಯಿತು. ಕಕ್ಕಯಂ ಕ್ಯಾಂಪಿಗೆ ಹೋಗಿ ಪ್ರಯೋಜನವಿಲ್ಲವೆಂದು ತಿಳಿದರೂ ರಾಜನನ್ನು ಹುಡುಕಿಕೊಂಡು ನಾನು ಅಲ್ಲಿಗೆ ಹೋದೆ. | </p> |
| <pic> | | </pic> |
| <p> | ರಾಜನ ಅಮ್ಮ ಮಾನಸಿಕ ರೋಗಿಯಾದುದು ರಾಜನ ದುರಂತದ ಬಳಿಕವೇ ಎಂಬ ಪ್ರಶ್ನೆಯನ್ನು ಹಲವು ಬಾರಿ ನಾನು ಎದುರಿಸಬೇಕಾಯಿತು. ಆದರೆ ರಾಜನ ಕಣ್ಮರೆಗೆ ಮೊದಲೇ ರಾಧೆಗೆ ಸಣ್ಣದಾಗಿ ಮಾನಸಿಕ ಅಸ್ವಸ್ಥತೆ ಕಾಣಿಸಿಕೊಂಡಿತ್ತು. ನನ್ನ ಹಿರಿಯ ಮಗಳು ರಮ ಹುಟ್ಟಿದ 15ನೇ ತಿಂಗಳಲ್ಲಿ ರಾಧ ಪ್ರಥಮ ಬಾರಿ ಮಾನಸಿಕ ಅಸ್ವಸ್ಥತೆಗೊಳಗಾದಳು. ಅಂದು ನೀಡಿದ ಷಾಕ್ ಟ್ರೀಟ್ ಮೆಂಟಿನಿಂದ ಅವಳು ಗುಣಮುಖಳಾದಳು. | </p> |
| <p> | ಅಂದು ಏಳು ಬಾರಿ ಷಾಕ್ ನೀಡಲಾಗಿತ್ತು. ಬಳಿಕ ರಾಜ ಹುಟ್ಟಿದನು. ಆತ ಹುಟ್ಟಿದ ಬಳಿಕ ಮೂರನೇ ಮಗು ಚಾಂದ್ ಳನ್ನು ಗರ್ಭಿಣಿಯಾದಾಗ ರಾಧ ಮತ್ತೊಮ್ಮೆ ಮಾನಸಿಕ ದೌರ್ಬಲ್ಯ ತೋರಿದಳು. ಆದರೆ ಗರ್ಭಿಣಿಯಾಗಿರುವುದರಿಂದ ಷಾಕ್ ನೀಡಲು ಸಾಧ್ಯವಿಲ್ಲವೆಂದು ವೈದ್ಯರು ತಿಳಿಸಿದರು. ಹಾಗಾಗಿ ಆಯುರ್ವೇದ ಚಿಕಿತ್ಸೆ ನೀಡಲಾಯಿತು. ಆಕೆ ಕೊಂಚ ಚೇತರಿಸಿಕೊಂಡಳು. ಹೆರಿಗೆಯ ಬಳಿಕ ಮತ್ತೊಮ್ಮೆ ಅಲೋಪತಿ ಚಿಕಿತ್ಸೆಗೆ ಕರೆದೊಯ್ದಾಗ ಷಾಕ್ ಪರಿಣಾಮಕಾರಿಯಾಗಲಿಲ್ಲ. “She had become shock proof” ಎಂಬುದು ಡಾಕ್ಟರ ಅಭಿಪ್ರಾಯವಾಗಿತ್ತು. ಆ ಬಳಿಕ ಚಿಕಿತ್ಸೆ ಮುಂದುವರೆಯುತ್ತಲೇ ಇತ್ತು. | </p> |

| | | |
|---|---|---|
| <p> | ರಾಜನ ದುರಂತ ಆಕೆಗೆ ತಿಳಿಯಲಿಲ್ಲ. ಕೋಝಿಕೋಡಿನಿಂದ ನಾನು ಎರ್ಣಾಕುಳಂಗ ಬಂದಾಗಲೆಲ್ಲ ಆಕೆ ರಾಜನನ್ನು ಕೇಳುತ್ತಲೇ ಇದ್ದಳು. ನಾನು ಹೇಳುವ ಸುಳ್ಳುಗಳು ಆಕೆಯನ್ನು ಮತ್ತಷ್ಟು ಅಸ್ವಸ್ಥಳನ್ನಾಗಿಸುತ್ತಿತ್ತು. ಸ್ನೇಹಿತರೊಡನೆ ಹಾಗೂ ಭೇಟಿಗಾಗಿ ಬಂದವರೊಡನೆ ಅವಳು ತುಂಬಾ ಹಟ ಮಾಡತೊಡಗಿದಳು. | </p> |
| <p> | ನನ್ನ ಮೂವರು ಮಕ್ಕಳಲ್ಲಿ ಆಕೆಗೆ ರಾಜನಲ್ಲಿ ಅಧಿಕ ವಾತ್ಸಲ್ಯವಿತ್ತೇನೋ ಎಂದೆನಿಸುತ್ತದೆ. ರಾಜನು ಚೆನ್ನಾಗಿ ಹಾಡುತ್ತಿರುವುದೇ ಅದಕ್ಕೆ ಕಾರಣವಾಗಿತ್ತು.ಯ ರಾಧಾ ಕೂಡಾ ಚೆನ್ನಾಗಿ ಹಾಡುತ್ತಿದ್ದಳು. ಕಾಲೇಜಿನಿಂದಬ ಬಂದಾಗಲೆಲ್ಲ ರಾಜನು ಹಾಡುತ್ತಿದ್ದ ಹಾಡುಗಳು ಆಕೆಯಲ್ಲಿ ಆಹ್ಲಾದವನ್ನುಂಟು ಮಾಡುತ್ತಿದ್ದುವು. ರಾಜನು ಆತನ ತಾಯಿ ಹೇಳಿದಾಗ ಅಲ್ಲದೆ ಬೇರಾರು ಹೇಳಿದಾಗಲೂ ಹಾಡಿದ್ದನ್ನು ನಾನು ಕೇಳಿಲ್ಲ. ರಜಾ ದಿನಗಳಲ್ಲಿ ತಾಯಿ ಮತ್ತು ಮಗ ನಡೆಸುವ ಕಛೇರಿ ಕೆಲವೊಮ್ಮೆ ಅರ್ಧರಾತ್ರಿಯವರೆಗೂ ಮುಂದುವರಿಯುತ್ತಿತ್ತು. ರಾಜನಿಗಾಗಿ ಹೊಸ ಹಾಡುಗಳನ್ನು ಕಲಿತು ಹಾಡಲೂ ಕೂಡಾ ರಾಧ ಶ್ರಮಿಸುತ್ತಿದ್ದಳು. ಇದಲ್ಲದೆ ರಾಜನು ಗಂಡು ಹುಡುಗನೆಂಬ ವ್ಯಾಮೋಹ ಕೂಡಾ ರಾಜನಲ್ಲಿ ಪ್ರತ್ಯೇಕ ವಾತ್ಸಲ್ಯ ತೋರಲು ಕಾರಣವಾಗಿತ್ತು. | </p> |
| <pic> | | </pic> |
| <p> | 1951ರಲ್ಲಿ ಚುನಾವಣಾ ಪ್ರಚಾರಕ್ಕಾಗಿ ತೇಕಿನ್ ಕಾಡು ಮೈದಾನದಲ್ಲಿ ನೆಹರು ಅವರು ಮಾಡಿದ ಭಾಷಣಕ್ಕೆ ಉತ್ತರವಾಗಿ ಮರುದಿನ ಸಿ.ಜಿ.ಯವರು ಭಾಷಣ ಮಾಡಿದ್ದರು. ಕಿವಿಗಿಂಪಾದ ಆ ಭಾಷಣ ಇಂದೂ ಕೂಡ್ಯೆ ನನ್ನ ಕಿವಿಗಳಲ್ಲಿ ಧ್ವನಿಸುತ್ತಿರುತ್ತದೆ. ಆ ಬಳಿಕ ಅವಕಾಶ ದೊರೆತಾಗಲೆಲ್ಲ ಸಿ.ಜಿ.ಯವರ ಭಾಷಣ ಕೇಳಲು ನಾನು ಓಡುತ್ತಿದ್ದೆ. ಆದರೆ ಆ ಸುಂದರವಾದ ಶಬ್ದಗಳನ್ನು ಮರ್ದನ ವೀರರಾದ ಪೊಲೀಸರು ವಿಳಂಬವಿಲ್ಲದೆ ಮೌನವಾಗಿಸಿದರು. ತ್ರಿಶೂರ್ ಜಿಲ್ಲೆಯಲ್ಲಿ ಆತನಷ್ಟು ದೌರ್ಜನ್ಯಕ್ಕೆ ತುತ್ತಾದ ಕಮ್ಯುನಿಸ್ಟ ನಾಯಕರು ಅಧಿಕ ಸಂಖ್ಯೆಯಲ್ಲಿರಲಿಲ್ಲ. ಆ ಮರ್ದನ ಅವರ ಆಯುಷ್ಯದ ಎಷ್ಟು ವರ್ಷಗಳನ್ನು ಕಡಿತಗೊಳಿಸಿತು ಎಂದು ನೆನೆಯುವಾಗ ತುಂಬಾ ದುಃಖವಾಗುತ್ತಿದೆ. | </p> |
| <p> | ನಾನು ಮತ್ತು ಎಂ. ಎಸ್. ಮಾಸ್ಟರ್ ಸಿ.ಜಿ.ಯೊಡನೆ ರಾಜನ ಕುರಿತು ಹೇಳಿದಾಗ ಈ ವಿಷಯವನ್ನು ತಾನು ಇದೇ ಮೊದಲ ಬಾರಿ ಕೇಳುತ್ತಿದ್ದೇನೆಂದು ಅವರಂದರು. ಮೊದಲೇ ತನಗೆ ತಿಳಿಸಲಿಲ್ಲವೇಕೆಂದು ಅವರು ಕೋಪಿಸಿಕೊಂಡರು. ನಮ್ಮೊಡನೆ ಕುಳಿತುಕೊಳ್ಳಲು ಹೇಳಿ ಸಿ.ಜಿ. ಅಚ್ಯುತ ಮೇನೋನರ ಬಳಿಗೆ ಹೋದರು. ಒಂದು ಗಂಟೆಯ ಬಳಿಕ ಅವರು ಹಿಂತಿರುಗಿ ಬಂದರು. ಮರುದಿನ ಬೆಳಿಗ್ಗೆ ಮೇನೋನರನ್ನು ಸಂಪರ್ಕಿಸಲು ಒಂದು ದೂರವಾಣಿ ಸಂಖ್ಯೆಯನ್ನೂ ನೀಡಿದರು. | |
| <p> | ಮರುದಿನ ಮೇರೆ ಮೀರಿದ ನಿರೀಕ್ಷೆಯಿಂದ ನಾನು ಫೋನ್ ಮಾಡಿದೆ. ಆದರೆ ಮೇನೋನ್ ಹಿಂದಿನ ಅದೇ ಮನಸ್ಥಿತಿಯಲ್ಲಿದ್ದರು. "ಜಯರಾಮು ಪಡಿಕ್ಕಲಿನೊಡನೆ ವಿಚಾರಿಸುವುದಿಲ್ಲ" ಎಂಬ ಮಾತನ್ನೇ ಪುನರುಚ್ಚರಿಸಿದರು. ಆಗ ಕರುಣಾಕರನೊಡನೆ ಕೇಳಬೇಕೆಂದು ನಾನು ಕೇಳಿಕೊಂಡೆ. 'I will not ask him, He will simply bluff. (ನಾನು ಅವರೊಡನೆ ಪ್ರಶ್ನಿಸುವುದಿಲ್ಲ. ಆತ ಬಾಯಿ ತೆರೆದೊಡನೆ ಸುಳ್ಳನ್ನೇ ಹೇಳುತ್ತಾನೆ) ಎಂದಾಗಿತ್ತು. ಮೇನೋನ ಉತ್ತರ. ನಮ್ಮ ಫೋನ್ ಸಂಭಾಷಣೆ ಅಂತ್ಯಗೊಳ್ಳುವ ಮೊದಲು ಎಂ. ಎಸ್. ಮಾಸ್ಟರೊಡನೆ ಕೆ.ಕೆ. ಮಾಸ್ಟರನ್ನು ಕರೆದುಕೊಂಡು ಬರಬೇಕೆಂದು ಮೇನೋನ್ ತಿಳಿಸಿದರು. ಇದರಂತೆ ಕೆ.ಕೆ.ಮಾಸ್ಟರನ್ನೂ ಕರೆದುಕೊಂಡೇ ಆಗಿತ್ತು ನಮ್ಮ ಮುಂದಿನ ತಿರುವನಂತಪುರದ ಯಾತ್ರೆ. | </p> |
| <p> | ದಿನಗಳು ಕಳೆಯುತ್ತಲೇ ಇದ್ದುವು. ಬೇಸಿಗೆ ಮೆಲ್ಲಗೆ ಮಳೆಗಾಲಕ್ಕೆ ಕಾಲಿಡುತ್ತಿತ್ತು. ನನ್ನ ಎರ್ಣಾಕುಳದ ಮನೆಯ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿತ್ತು. ರಾಜನ ತಾಯಿಯ ಮಾನಸಿಕ ಅಸ್ವಸ್ಥತೆ ಮತ್ತಷ್ಟು ಉಲ್ಬಣಗೊಂಡಿತು. ಆದುದರಿಂದ ನನ್ನ ಮಕ್ಕಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿಯನ್ನು ರಾಜನ ಮಾವ ಅಚ್ಯುತ ವಾರಿಯರ್ ಮತ್ತು ಅವರ ಹೆಂಡತಿ, ನನ್ನ ಸಹೋದರಿಯೂ ಆದ ಕೊಚ್ಚಮ್ಮಣಿ ವಾರಸ್ಯಾರ್ ಸಂತೋಷದಿಂದ ವಹಿಸಿಕೊಂಡರು. | </p> |
| <pic> | | </pic> |

| | | |
|---|---|---|
| <p> | ಇತ್ತೀಚೆಗೆ ಶ್ರೀ ಕೆ. ಕರುಣಾಕರನ್ ಒಂದು ವೀರವಾದವನ್ನು (ಜಂಭಕೊಚ್ಚಿಕೊಳ್ಳುವುದು) ಹೊರಹಾಕಿದನು. ಕೇರಳದಲ್ಲಿ ಇಂದು ನಕ್ಸಲೈಟ್ ಚಟುವಟಿಕೆ ಇಲ್ಲವೇ ಇಲ್ಲ. ಅದಕ್ಕೆ ತಾನು ತನ್ನ ಆಡಳಿತ ಕಾರಣರಾಗಿದ್ದೇವೆ, ಎಂಬುದಾಗಿತ್ತು ಆತನ ವಾದ. ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣ ಹಾಗೂ ಅದಕ್ಕೆ ಸಂಬಂಧಿಸಿದಂತೆ ನಡೆದ ಪೊಲೀಸ್ ನರಬೇಟೆ ಕರುಣಾಕರನ್ ಇಂತಹ ಹೇಳಿಕೆ ನೀಡಲು ಕಾರಣವೆಂದು ನನಗನ್ನಿಸಿತು. | </p> |
| <p> | 1976 ಫೆಬ್ರವರಿ 28ರಂದು ಹಲವರು ಸೇರಿಕೊಂಡು ಕಾಯಣ್ಣ ಪೊಲೀಸ್ ಸ್ಟೇಶನ್ ಆಕ್ರಮಣ ಮಾಡಿ ಅಲ್ಲಿಂದ ಒಂದು ಕೋವಿಯನ್ನೆತ್ತಿಕೊಂಡು ಹೋದರು. ಈ ಘಟನೆಗೆ ನಕ್ಸಲೈಟ್ ಗಳು ಕಾರಣವೆಂದು ಅನುಮಾನಿಸಲು ಅಧಿಕಾರಿಗಳಿಗೆ ಹೆಚ್ಚು ಹೊತ್ತೇನೂ ಬೇಕಾಗಲಿಲ್ಲ. ಪೊಲೀಸ್ ಸ್ಟೇಶನ್ ಆಕ್ರಮಣದ ಕುರಿತು ತನಿಖೆ ನಡೆಸಲು ಕಕ್ಕಯಂ ಕ್ಯಾಂಪನ್ನು ಸ್ಥಾಪಿಸಲಾಯಿತು. ಕಕ್ಕಯಂನಲ್ಲಿ ಟಿನ್ ಶೀಟ್ ಹೊದಿಸಿದ ಉದ್ದವಾದ ಒಂದು ಷೆಡ್ ಈ ಕ್ಯಾಂಪ್ ಆಗಿತ್ತು. ಕ್ಯಾಂಪಿನ ಮುಂಭಾಗದಲ್ಲಿ ಒಂದು ಜಲಾಶಯವಿತ್ತು. ಕ್ಯಾಂಪಿನಿಂದ ಒಂದೆರಡು ಫರ್ಲಾಂಗ್ ದೂರದಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಇನ್ಸ್ ಪೆಕ್ಟರ್ ಬಂಗಲೆ ಇತ್ತು. ಹತ್ತಿರದಲ್ಲೇ ಒಂದು ಆರೋಗ್ಯ ಕ್ಯಾಂಪ್ ಕೂಡಾ ಇತ್ತು. | </p> |
| <p> | ಪೋಲೀಸ್ ಸ್ಟೇಶನ್ ಆಕ್ರಮಣದ ಬಳಿಕ 29ನೇ ದಿನಾಂಕದಿಂದ ಕಾಯಣ್ಣ, ಕೂರಾಚ್ಚುಂಡ್, ಕಕ್ಕಯಂ ಮುಂತಾದ ಗ್ರಾಮಗಳಿಂದ ನೂರಾರು ಯುವಕರನ್ನು ಹಿಡಿದುಕೊಂಡು ಬಂದು ಚಿತ್ರಹಿಂಸೆ ನೀಡತೊಡಗಿದರು. ಪೊಲೀಸರು ಸಾಧ್ಯವಿದ್ದಷ್ಟು ಯುವಕರನ್ನು ಕರೆದುಕೊಂಡು ಬಂದು ಇಳಿಸುತ್ತಿದ್ದರು. ಪುನಃ ಹೋಗಿ ಮತ್ತಷ್ಟು ಜನರನ್ನು ಕರೆದುಕೊಂಡು ಬರುತ್ತಿದ್ದರು. ಈ ಪ್ರಕ್ರಿಯೆ ಕೆಲವು ದಿನಗಳ ವರೆಗೆ ಮುಂದುವರಿಯಿತು. | </p> |
| <p> | ಇಂಗ್ಲೆಂಡಿನ ಸ್ಕಾಟ್ ಲ್ಯಾಂಡ್ ಯಾರ್ಡಿನಲ್ಲಿ ಅಪರಾಧ ತನಿಖೆಯ ಆಧುನಿಕ ತಂತ್ರಗಳಲ್ಲಿ ತರಬೇತಿ ಪಡೆದು ಹಿಂತಿರುಗಿದ ಡಿ.ಐ.ಜಿ. ಜಯರಾಮ ಪಡಿಕ್ಕಲ್ ರಿಗೆ  ಈ ತನಿಖೆಯ ಜವಾಬ್ದಾರಿ ವಹಿಸಲ್ಪಟ್ಟಿತ್ತು. ಈ ಇಡೀ ಮೊಕದ್ದಮೆ ಆತನ ಕೈಯೊಳಗಿತ್ತು. | </p> |
| <p> | ಇವರ ಅಪರಾಧ ತನಿಖೆಯ ರೀತಿಯ ಕುರಿತು ನಾನು ಚಿಕ್ಕದಾದ ಒಂದು ವಿವರ ನೀಡುವೆ. ಅಪರಾಧ ಸಾಬೀತುಪಡಿಸಲು ಆಧುನಿಕ ಸಂಪ್ರದಾಯಗಳೇನನ್ನೂ ಇವರು ಪರೀಕ್ಷಿಸಿ ನೋಡಲಿಲ್ಲ. ಚಿತ್ರಹಿಂಸೆಯೇ ಇವರ ಏಕ ರೀತಿಯಾಗಿತ್ತು. ಅದನ್ನಾತ ಧಾರಾಳವಾಗಿ ಉಪಯೋಗಿಸಿದನು. | </p> |
| <pic> | | </pic> |
| <p> | ಕಕ್ಕೆಯಂ ಕ್ಯಾಂಪಿನ ಪ್ರವೇಶದ್ವಾರದಲ್ಲಿ ಈ ಸ್ನೇಹನಿಧಿಗಳಾದ ಅಧ್ಯಾಪಕರುಗಳನ್ನು ತಡೆಯಲಾಯಿತು. ಬಳಿಕ ಪಡಿಕ್ಕಲ್ ಗೆ ವಿವರ ತಿಳಿಸಿದಾಗ, “ಬೇಕಾದರೆ ಪ್ರಿನ್ಸಿಪಾಲರನ್ನು ನೋಡಬಹುದು. ಎಲ್ಲಾ ಪ್ರೊಫೆಸ್ಸರುಗಳನ್ನು ಕಾಣಲು ಸಾಧ್ಯವಿಲ್ಲ” ಎಂಬ ಉದ್ಧಟತನದ ಉತ್ತರ ದೊರೆಯಿತು. ಹಿಂದಿನ ಕಾಲದ ಓರ್ವ ಮಿಲ್ಲಿನ ಯಜಮಾನ ತನ್ನ ಕಾರ್ಮಿಕರೊಡನೆ ವರ್ತಿಸುವಂತಹ ವರ್ತನೆಯಾಗಿತ್ತು, ಪಡಿಕ್ಕಲ್ ನ ವರ್ತನೆ. ಜಯರಾಂ ಪಡಿಕ್ಕಲ್ ನ ವಿವಿಧ ದುರ್ಗುಣಗಳಿಗೆ ಇನ್ನೂ ಬಹಳಷ್ಟು ಉದಾಹರಣೆಗಳಿವೆ. ಅವುಗಳನ್ನು ಆಮೇಲೆ ಹೇಳುವೆ. ಪ್ರಾಂಶುಪಾಲ ವಹಾಬುದೀನರ ಉಪದೇಶಾನುಸಾರ ನಾನು ತಿರುವನಂತಪುರಕ್ಕೆ ಹೋಗಿ ರಾಜನ ಕುರಿತು ತನಿಖೆ ನಡೆಸಿದೆ. ಆರ್. ಇ. ಸಿ.ಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ರಾಜನೊಡನೆ ಬಹಳ ಸ್ನೇಹವಿತ್ತು. ಪ್ರಿನ್ಸಿಪಾಲ್ ವಹಾಬುದ್ದೀನರಿಗೆ ರಾಜನು ಪ್ರೀತಿಯ ವಿದ್ಯಾರ್ಥಿಯಾಗಿದ್ದನು. ಅವರಿಗೆ ರಾಜನ್ ಮೊಕದ್ದಮೆಯಲ್ಲಿದ್ದ ಆಸಕ್ತಿ ರಾಜನ್ ಮೊಕದ್ದಮೆಯಲ್ಲಿ ಕೊನೆಯವರೆಗೂ ನೆಲೆ ನಿಂತಿತ್ತು. ಅದು ಇಂದಿಗೂ ಮುಂದುವರಿಯುತ್ತಿದೆ. | </p> |
| <p> | ತಿರುವನಂತಪುರಕ್ಕೆ ಹೋಗಿ ಮಾಡಿದ ತನಿಖೆ ಫಲಪ್ರದವಾಗದ ಕಾರಣ ನಾನು ವಿಷಣ್ಣನಾದೆ. ಇನ್ನು ಕಕ್ಕಯಂ ಕ್ಯಾಂಪ್ ಮತ್ತು ಚಾತ್ತಮಂಗಲದಲ್ಲಿ ಇನ್ನೊಮ್ಮೆ ತನಿಖೆ ಮಾಡಬೇಕೆಂದು ನಾನು ಅಲ್ಲಿಗೆ ಹೋದೆ. | </p> |
| <p> | ರಾಜನ ಅಧ್ಯಯನ ಕಾಲದಲ್ಲಿ ಆತನು ಹೆಚ್ಚಿನ ದಿನಗಳಲ್ಲಿ ತನ್ನ ಮಾವನ ಸೋದರಳಿಯ, ಆರ್.ಇ.ಸಿ.ಯಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಪ್ರೊಫೆಸರ್ ಆಗಿದ್ದ ಮೋಹನ ಕುಮಾರ್ ಎಂಬುವವರ ಕುಟುಂಬದೊಡನೆ ವಾಸಿಸುತ್ತಿದ್ದನು. ನಾನು ರಾಜನನ್ನು ಹುಡುಕುತ್ತಿದ್ದ ಸಂದರ್ಭದಲ್ಲಿ ಅಲ್ಲಿ ಎರಡು ಮೂರು ದಿನ ಕ್ಯಾಂಪ್ ಮಾಡಿದ್ದೆ. | </p> |

| | | |
|---|---|---|
| | ಆಗ ಒಂದು ದಿನ ಸಂಜೆಗೆ ಕ್ರೈಂಬ್ರಾಂಚ್ ಸರ್ಕಲ್ ಇನ್ಸ್ ಪೆಕ್ಟರ್ ಶ್ರೀಧರನ್ ಎಂಬುವವರು ಇಬ್ಬರು ಪೊಲೀಸರೊಡನೆ ನನ್ನನ್ನು ಹುಡುಕಿಕೊಂಡು ಬಂದರು. ನನ್ನೊಡನೆ ಬಹಳ ಸೌಮ್ಯವಾಗಿಯೇ ಅವರು ಮಾತನಾಡಿದರು. ನನ್ನ ಮಗನ ಕಣ್ಮರೆಯ ಕುರಿತು ಅವರು ವಿಷಾದ ಸೂಚಿಸಿದರು. ಮಾತ್ರವಲ್ಲ ಕೆಲವು ಉಪದೇಶ, ನಿರ್ದೇಶಗಳನ್ನೂ ನೀಡಿದರು. ಅದರಲ್ಲಿ ಒಂದು ಉಪದೇಶ ಬಹಳ ರಸಕರವಾಗಿತ್ತೆನ್ನಿಸಿತು. ನಕ್ಸಲ್ ಮುಖಂಡ ವೇಣು ಅವರ ಒಂದು ಪುಸ್ತಕ ಓದಲು ಉಪದೇಶಿಸಿದ್ದಾಗಿತ್ತು ಅದು. ಯಥಾರ್ಥವಾಗಿ ನಾನು ಆ ಪುಸ್ತಕ ಓದಿದ್ದರೂ ಈ ಪೊಲೀಸ್ ಅಧಿಕಾರಿಯೊಡನೆ ಚರ್ಚಿಸಲು ಆಸಕ್ತಿ ಇಲ್ಲದ ಕಾರಣ ನಾನು ಆ ಪುಸ್ತಕ ಓದಿಲ್ಲವೆಂದೆ. ಆಗ, ವೇಣು ಬಹಳ ತಿಳುವಳಿಕೆಯುಳ್ಳವನೆಂದೂ, ನಾನು ಆ ಪುಸ್ತಕ ಓದಬೇಕೆಂದೂ ನನಗೆ ಸಿ.ಐ. ಉಪದೇಶ ನೀಡಿದರು. ನಾನು ಆ ಉಪದೇಶವನ್ನು ಸ್ವೀಕರಿಸಿದೆ. ಆ ಬಳಿಕ ಹತ್ತು ಹನ್ನೊಂದು ಗಂಟೆಯ ವರೆಗೆ ಕುಳಿತಿದ್ದು ಬಳಿಕ ಎದ್ದು ಹೋದರು. | |
| <pic> | | </pic> |
| <p> | ಪೊಲೀಸರು ಬಂಧಿಸಿ ಕರೆದೊಯ್ದ ರಾಜನ ಕುರಿತು ಯಾವ ವಿವರ ತಿಳಿಸಲು ಕೂಡಾ ಮುಖ್ಯ ಮಂತ್ರಿ ಅಚ್ಯುತ ಮೇನೋನರಿಂದ ತೊಡಗಿ ಕಾಯಣ್ಣ ಸರ್ಕಲ್ ಇನ್ಸ್ ಪೆಕ್ಟರ್ ಶ್ರೀಧರನ ವರೆಗೆ ಯಾರೂ ಸಿದ್ಧರಾಗಲಿಲ್ಲ. ನಾನು ಕೊಟ್ಟ ಹೇಬಿಯಸ್ ಕೋರ್ಪಸ್ ಅರ್ಜಿಯ ತೀರ್ಪಿನನುಸಾರ ಅವನನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಸರಕಾರ ಸೋತಾಗ ಮಾತ್ರ ಅವನ ಕುರಿತ ವಾಸ್ತವತೆ ಏನೆಂದು ನಮಗರಿವಾಯಿತು. ಈ ವಿಷಯದಲ್ಲಿ ಅಚ್ಯುತ ಮೇನೋನ್ ಮತ್ತು ಕರುಣಾಕರ ನನ್ನೊಡನೆ ತೋರಿದ ಕ್ರೌರ್ಯ ನನ್ನನ್ನು ಅತ್ಯಧಿಕ ನೋಯಿಸಿತು. ಇವರಾರಿಗೂ ಇದು ಮೊದಲೇ ತಿಳಿದಿರಲಿಲ್ಲ ಎಂದರೆ ಅದರ ಅರ್ಥ ಅವರಂದು ಅಲಂಕರಿಸಿದ್ದ ಪದವಿಯನ್ನು ಅಲಂಕರಿಸಲು ಅವರಿಗೆ ಅರ್ಹತೆ ಇರಲಿಲ್ಲ ಎಂದು ಹೇಳಲು ನಾನೆಂದೂ ಹಿಂಜರಿಯಲಾರೆ. | </p> |
| <p> | ಪೊಲೀಸ್ ಬಂಧಿಸಿ ಕರೆದೊಯ್ದ ಮಗನ ಕುರಿತು ಯಾವ ವಿವರವೂ ದೊರೆಯದಿದ್ದರೆ ಅವನ ತಂದೆ-ತಾಯಿಗಳು ಮತ್ತು ಇತರ ಬಂಧುಗಳಿಗೆ ಅದು ಎಷ್ಟೊಂದು ವೇದನಾಜನಕವಾಗಿರುತ್ತದೆ ಎಂಬುದು ಅದನ್ನನುಭವಿಸಿದವರಿಗೆ ಮಾತ್ರ ಗೊತ್ತು. | </p> |
| <p> | ನನಗೆ ಸಂಬಂಧಪಟ್ಟಂತೆ, ದೇಹದಲ್ಲಿ ಸೂಜಿ ಚುಚ್ಚುತ್ತಿರುವಂತಹ ಒಂದು ನೋವನ್ನು ನಾನು ಯಾವಾಗಲೂ ಅನುಭವಿಸುತ್ತಿದ್ದೆ. ಊಟಕ್ಕೆ ಕುಳಿತುಕೊಳ್ಳುವಾಗ ನಾನು ಅವನನ್ನು ಜ್ಞಾಪಿಸಿಕೊಳ್ಳುತ್ತಿದ್ದೆ. ಆಗ ಆಹಾರ ನುಂಗಲಾಗುತ್ತಿರಲಿಲ್ಲ. ನಿದ್ರಿಸುವಾಗಲೂ ಅವನ ನೆನಪುಗಳು ನನ್ನನ್ನು ಮುತ್ತಿಕೊಳ್ಳುತ್ತಿದ್ದವು. ಕಠಿಣವಾದ ಬಿಸಿಯಿಂದ ಕಂಪಿಸುವ ಒಂದು ಲೋಹದ ತುಂಡಿನಂತೆ ನನ್ನ ಆತ್ಮ ಯಾವಾಗಲೂ ಹೊರಳಾಡುತ್ತಿತ್ತು. ನಾನು ಸಾಕಷ್ಟು ಪ್ರಯತ್ನಿಸದ ಕಾರಣ ರಾಜನನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ ಎಂದು ಕೂಡಾ ನನ್ನ ಪ್ರೀತಿಪಾತ್ರರು ದೂರಿದರು. ರಾಜನಿಲ್ಲದ ಸೌಹೃದ ನಿಲಯ ಹಲವರಿಗೆ ಅಸ್ವಸ್ಥತೆಯಿಂದ ಕೂಡಿದ ಒಂದು ನೋಟದಂತಾಯಿತು. ಸೌಹಾರ್ದ ನಿಲಯಕ್ಕೆ ವಿದ್ಯಾರ್ಥಿಗಳೂ ಕೂಡಾ ತಡೆಯಿಲ್ಲದೆ ಬರುತ್ತಿದ್ದರು. ಆದರೆ ರಾಜನು ಕಣ್ಮರೆಯಾದ ಬಳಿಕ ಭೀಕರವಾದ ಒಂದು ನಿಶ್ಶಬ್ಧತೆ ಸೌಹೃದ ನಿಲಯವನ್ನು ಆವರಿಸಿಕೊಂಡಿತು. | </p> |
| <p> | ಮನೆಯೊಳಗಿನ ಪರಿಸ್ಥಿತಿ ಇದಾದರೆ, ಹೊರಗೆ ಹೋದಾಗ ಜನರು ನನ್ನನ್ನು ಕಂಡೊಡನೆ ದೂರ ಸರಿಯುತ್ತಿದ್ದರು. ಅವರ ದೃಷ್ಟಿಯಲ್ಲಿ ನಾವೋರ್ವ ನಕ್ಸಲೈಟ್ ನ ತಂದೆಯಾಗಿದ್ದೆ. ನಾನು ಕೂಡಾ ಜನಗಳೊಡನೆ ಮಾತನಾಡಲೂ ಭಯಪಟ್ಟೆ. ಅವರು ಏನೆಂದುಕೊಳ್ಳುವರೋ ಎಂಬ ಭಯ ನನ್ನದಾಗಿತ್ತು. | </p> |
| <p> | ಕೆಲವೊಮ್ಮೆ, ನಾನು ಪ್ರೇಂಚಂದರ ಕೆಲವು ಕಥಾ ಪಾತ್ರಗಳಂತಿದ್ದೆ ಎಂದು ನನಗನ್ನಿಸುತ್ತಿತ್ತು. ಪರೀಕ್ಷೆ ಎಂಬ ಕಥೆಯಲ್ಲಿ ಅವರು ಚಿತ್ರೀಕರಿಸಿದ ಸ್ವಾತಂತ್ರ್ಯ ಹೋರಾಟಗಾರನಾಗಿ ನನ್ನನ್ನು ನಾನು ಚಿತ್ರಿಸುತ್ತಿದ್ದೆ. ಜನಗಳು ನನ್ನನ್ನು ಅಷ್ಟೊಂದು ಭಯದಿಂದ ತಿರಸ್ಕರಿಸಲಾರಂಭಿಸಿದರು. | </p> |
| <p> | ಹಾಗಿದ್ದಾಗ ನನಗೆ ಕಾಮ್ರೇಡ್ ಎ.ಕೆ.ಗೋಪಾಲನ ಅವರಿಂದ ಒಂದು ಪತ್ರ ದೊರೆಯಿತು. ಸೌಹೃದ ನಿಲಯಕ್ಕೆ ಹರಿದು ಬಂದ ಕಾರುಣ್ಯದ ಚಂದ್ರಮನಂತಾಗಿತ್ತು ಆ ಪತ್ರ. | </p> |

| | | |
|---|---|---|
| <pic> | | </pic> |
| <p> | ನಾನು ಪ್ರಧಾನಮಂತ್ರಿ ಮತ್ತು ಅಧ್ಯಕ್ಷರಿಗೆ ಕಳುಹಿಸುತ್ತಿರುವ ಮನವಿಗಳ ಆಧಾರದಲ್ಲಿ ಅಸಂಖ್ಯ ಪೊಲೀಸ್ ಅಧಿಕಾರಿಗಳು ನನ್ನನ್ನು ಪ್ರಶ್ನಿಸಿದ್ದಾರೆ. ನಿಮ್ಮ ಮಗನು ಎಲ್ಲಿಗೆ ಹೋಗಿದ್ದಾನೆ ಎಂಬುದೇ ಹಲವರ ಪ್ರಥಮ ಪ್ರಶ್ನೆಯಾಗಿತ್ತು. ಈ ಉದ್ಯೋಗಿಗಳೆಡೆಯಲ್ಲಿ ಸಿ.ಬಿ.ಐ.ಯ ಎರ್ಣಾಕುಲಂ ಜಿಲ್ಲೆಯ ಪೊಲೀಸ್ ಎಸ್. ಪಿ. ಬಾಲಕೃಷ್ಣ ಪಿಳ್ಳೈ ಎಂಬುವರು ತನ್ನನ್ನು ಭೇಟಿಯಾಗಬೇಕೆಂದು ನನ್ನ ಬಳಿಗೆ ಜನ ಕಳುಹಿಸಿದರು. ಅದು ಪ್ರತ್ಯೇಕವಾದ ಬೇರೆ ಒಂದು ಅನುಭವವಾಗಿತ್ತು. | </p> |
| <p> | ಸಿ.ಐ.ಬಿ. ಎಂಬ ಹೊಸ ವಿಭಾಗದಲ್ಲಿರುವವರಾಗಿರಬೇಕೆಂದುಕೊಂಡು ನಾನು ಈ ಸಿ.ಐ.ಬಿ.ಯ ಎಸ್. ಪಿ.ಯವರ ಮುಂದೆ ಹಾಜರಾದೆ. ನಾನು ತ್ರಿಶೂರಿನ ಸೈಂಟ್ ಥಾಮಸ್ ಕಾಲೇಜಿನಲ್ಲಿ ಕೆಲಸ ಮಾಡಿದ್ದೆ. ಆ ಸಮಯದಲ್ಲಿ ಈ ಸಿ.ಐ.ಬಿ. ಅಧಿಕಾರಿ ಅಲ್ಲಿ ಅಧ್ಯಾಪಕರಾಗಿದ್ದರು. ಆ ಬಳಿಕ ಐ.ಪಿ.ಎಸ್. ಪಡೆದುಕೊಂಡು ಈ ಸಿ.ಐ.ಬಿ.ಯಲ್ಲಿ ಸೇರಿದ್ದರು. ನಾನು ಸೈಂಟ್ ಥಾಮಸ್ ನಲ್ಲಿ ಕೆಲಸ ಮಾಡುವಾಗ ಆತ ಅಲ್ಲಿ ಕೆಲಸದಲ್ಲಿರಲಿಲ್ಲ. ನಾನು ಆತನ ಭೇಟಿಗಾಗಿ ಹೋಗುವಾಗ ಏ.ಜಿ.ಆಫೀಸಿನಲ್ಲಿ ಲೆಕ್ಕಾಧಿಕಾರಿಯಾಗಿರುವ ನನ್ನ ತಮ್ಮ ಕೃಷ್ಣನ್ ಕುಟ್ಟಿ ವಾರಿಯರ್ ಕೂಡಾ ನನ್ನೊಡನಿದ್ದನು. | </p> |
| <p> | ನಾವು ಪರಸ್ಪರ ಪರಿಚಯ ಮಾಡಿಕೊಂಡೆವು. ಪೊಲೀಸ್ ಅಧಿಕಾರಿ ನನ್ನ ತಮ್ಮನೊಡನೆ ಕೊಂಚ ಹೊರಗಿರಲು ಹೇಳಿದರು. ಬಳಿಕ ಆ ಅಧಿಕಾರಿ ನನ್ನೊಡನೆ ಒಂದು ಪ್ರಶ್ನೆ ಕೇಳಿದರು. “ನಾನು ತಮ್ಮ ಮಗನನ್ನು ಬಿಡುಗಡೆ ಮಾಡಿಸಿಕೊಡುತ್ತೇನೆ. ಆದರೆ ಬಿಡುಗಡೆಯ ಬಳಿಕ ಆತನಿಂದ ಏನು ಮಾಡಿಸಬೇಕೆಂದುಕೊಂಡಿದ್ದೀರಿ?” | </p> |
| <p> | ಈ ಪ್ರಸ್ನೆ ನನ್ನನ್ನು ಅಸ್ವಸ್ಥಗೊಳಿಸಿತು. ಅದರ ಉದ್ದೇಶವೇನೆಂದು ಕೂಡಲೇ ನನಗೆ ಮನವರಿಕೆಯಾಗಲಿಲ್ಲ. | </p> |
| <p> | ರಾಜನ ಎಂಜಿನಿಯರಿಂಗ್ ಪೂರ್ತಿಯಾಗಿಸಬೇಕೆಂಬುದು ನನ್ನ ಉದ್ದೇಶ ಎಂದು ನನಂದೆ. ಆಗ “ಅದು ಬೇಡ” ಎಂದನು ಆ ಅಧಿಕಾರಿ. ನಾನು ಆಶ್ಚರ್ಯಚಕಿತನಾದೆ. ಆತನ ಉದ್ದೇಶವೇನೆಂದು ನನಗೆ ಅರ್ಥವಾಗಲಿಲ್ಲ. ಆಗ ಪೊಲೀಸ್ ಅಧಿಕಾರಿ ನಾಟಕೀಯವಾಗಿ “ರಾಜನು ನಕ್ಸಲೈಟರೊಡನೆಯೇ ಮುಂದುವರಿಯಲಿ ಹಾಗೆ ಮುಂದುವರಿದು ನಕ್ಸಲೈಟ್ ಗಳ ಕಾರ್ಯಕ್ರಮಗಳನ್ನು ನಮಗೆ ತಿಳಿಸುತ್ತಿರಬೇಕು.” ರಾಜನ್ ನಕ್ಸಲೈಟರ ಮಧ್ಯದಲ್ಲಿ ಓರ್ವ ಪೊಲೀಸ್ ಏಜಂಟ್ ಆಗಿ ಕಾರ್ಯ ನಿರ್ವಹಿಸಬೇಕು ಎಂಬುದು ಆತನ ಮಾತಿನ ಅರ್ಥವಾಗಿತ್ತು. | </p> |
| <p> | ನಾನು ಭ್ರಮಾಧೀನನಾದೆ. ರಾಜನನ್ನು ಕಾಣಬೇಕೆಂಬ ಉತ್ಕಂಠೆ ಒಂದು ನಿಮಿಷ ಬಹಳ ಶಕ್ತಿಯುತವಾಯಿತು. | </p> |
| <pic> | | </pic> |
| <p> | 1977 ರ ಫೆಬ್ರವರಿ 22ರಂದು ತುರ್ತುಪರಿಸ್ಥಿತಿಯನ್ನು ಹಿಂತೆಗೆಯಲಾಯಿತು. ಕಳೆದ ಹಲವು ದಿನಗಳಿಂದ ರಾಜನನ್ನು ಕಂಡುಹಿಡಿಯಲು ಪ್ರಯತ್ನಿಸಿದ ನನ್ನ ಶ್ರಮ ಮಂದಗತಿಯಲ್ಲಿ ಮುಂದುವರಿಯಿತು. ಆದರೆ ತುರ್ತುಪರಿಸ್ಥಿತಿಯ ಹಿಂತೆಗೆತ ಕೇರಳದ ಸಮೂಹ ಚಲನೆಗಳಲ್ಲಿ ದೊಡ್ಡ ಬದಲಾವಣೆ ಉಂಟುಮಾಡಿತು. ಸ್ವಾತಂತ್ರ್ಯದ ಶುದ್ಧವಾಯು ಹಲವು ಭಾಗಗಳಲ್ಲಿ ಮುನ್ನುಗ್ಗಿತು. ಸ್ವೇಚ್ಛಾಧಿಪತ್ಯದ ನಿಷ್ಠುರವಾದ ಮುಳ್ಳುಮೊನೆಗಳಿಂದ ಎದೆಗೆ ಚುಚ್ಚಿಸಿಕೊಂಡ ಮನುಷ್ಯರಿಂದ ಆಶ್ವಾಸನೆಯ ನಿಟ್ಟುಸಿರು ಹೊರಬಿತ್ತು. ಆಹ್ಲಾದದ ಗಂಟಾನಾದ ಎಲ್ಲೆಲ್ಲೂ ಮೊಳಗಿತು. ಜನತೆಯ ವಿಮೋಚನೆಯ ಆಚರಣೆಯಾಗಿ ಹಲವು ಭಾಗಗಳಲ್ಲಿ ಸಂಭ್ರಮೋಲ್ಲಾಸಗಳ ಕಾರ್ಯಕ್ರಮಗಳೂ ಜಾಥಾಗಳೂ ನಡೆದವು. | </p> |
| <p> | ರಾಷ್ಟ್ರೀಯತೆ ಮತ್ತು ಆಡಳಿತೆಯ ಬದಲಾವಣೆ ನನ್ನನ್ನು ಮತ್ತೊಮ್ಮೆ ಕಾರ್ಯೋನ್ಮುಖವಾಗಿಸಿತು. ಅಡ್ವೊಕೇಟ್ ರಾಮಕುಮಾರ್ ಮತ್ತು ಪಾರ್ಲಿಮೆಂಟ್ ಸದಸ್ಯರಾದ ವಿ.ವಿಶ್ವನಾಥ ಮೇನೋನ್ ಅವರೊಡನೆ ಇನ್ನು ಏನು ಮಾಡಬೇಕೆಂಬ ಕುರಿತು ದೀರ್ಘಾಲೋಚನೆ ಮಾಡಿದೆ. ಇನ್ನೇನು ಮಾಡಬೇಕೆಂಬ ಕುರಿತು ರಾಮಕುಮಾರರಿಗೆ ಯಾವ ಸಂದೇಹವೂ ಇರಲಿಲ್ಲ. ಕೂಡಲೇ ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ರಿಟ್ ಸಲ್ಲಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಅದೂ ಕೂಡಾ, ನಾನು ಸಲ್ಲಿಸುವ ರಿಟ್, ತುರ್ತುಪರಿಸ್ಥಿತಿಯ ಬಳಿಕದ ಪ್ರಪ್ರಥಮ ರಿಟ್ ಆಗಬೇಕೆಂಬ ನಿರ್ಬಂಧವೂ ಇತ್ತು. ಆ ಬಳಿಕ ನಾನು ಹೆಚ್ಚು ಯೋಚಿಸದೆ ನ್ಯಾಯವಾದಿ ಈಶ್ವರಯ್ಯರನ್ನು | </p> |

| | | |
|---|---|---|
| | ಸಮೀಪಿಸಿದೆ. ಅವರು ಎಲ್ಲಾ ಕಾಲಗಳಿಗೂ ಅನ್ವಯಿಸುವಂತೆ ಪ್ರಬಲ ಪಂಡಿತರುಗಳಲ್ಲಿ ಓರ್ವರಾಗಿದ್ದರು. ನಾವು ಈಶ್ವರ ಅಯ್ಯರ್ ಅವರ ಬಳಿ ಹೋದಾಗ ಅವರು ನಮ್ಮ ನಿರೀಕ್ಷೆಯಲ್ಲೇ ಇದ್ದರು ಎಂಬಂತಾಗಿತ್ತು ಅವರ ನಡವಳಿಕೆ. ತಡಮಾಡದೆ ನಾವು ರಿಟ್ ಸಿದ್ಧಪಡಿಸುವ ಕರ್ಯದಲ್ಲಿ ತೊಡಗಿದೆವು. ರಿಟ್ ಸಮರ್ಪಿಸುವುದರೊಡನೆ ಆ ಘಟನೆಯ ಸಾಕ್ಷಿಗಳಾಗಿ ಹಲವರ ಸತ್ಯ ವಾಙ್ಮೂಲವನ್ನೂ ಸಮರ್ಪಿಸಬೇಕೆಂಬುದು ನಿಯಮ. ಈ ಜವಾಬ್ದಾರಿ ನನ್ನದಾಗಿತ್ತು. ಇಂತಹ ಸಾಕ್ಷಿಗಳು ಚಾತ್ತಮಂಗಲಂ ದೊರೆಯಬಹುದಾಗಿತ್ತು. ಈಶ್ವರ ಅಯ್ಯರ್ ನಿರ್ದೇಶನದಂತೆ ನಾನು ಕೋಝಿಕ್ಕೋಡಿನ ಮಾರ್ಕ್ಸಿಸ್ಟ್ ಪಾರ್ಟಿ ಕಛೇರಿಗೆ ಹೋಗಿ ಪಾರ್ಟಿ ಜಿಲ್ಲಾ ಕಾರ್ಯದರ್ಶಿ ಕೇಳು ಏಟ್ಟನ್ ಎಂಬವರನ್ನು ಭೇಟಿ ಮಾಡಿದೆ. ನಾನಲ್ಲಿಗೆ ಹೋದಾಗ ಅವರು ನನ್ನ ಬರುವನ್ನೇ ಎದಿರು ನೋಡುತ್ತಿದ್ದರು. ಈಶ್ವರ ಅಯ್ಯರ್ ಕೇಳು ಏಟನ್ ಅವರಿಗೆ ನನ್ನ ಆಗಮನದ ಕುರಿತು ವಿವರಣೆ ನೀಡಿರಬಹುದು. ಕೇಳು ಏಟನ್ ರನ್ನು ಕಂಡ ಬಳಿಕ ನನಗೆ ಯಾವ ತೊಂದರೆಯೂ ಉಂಟಾಗಲಿಲ್ಲ. | |
| <pic> | | </pic> |
| <p> | ಸಂಸ್ಕಾರದ ಒಂದು ಹನಿಯಾದರೂ ಇರುವವರಿಂದ ಬರೆಯಲಸಾಧ್ಯವಾದಂತಹ ಲೇಖನವಾಗಿತ್ತು ಅದು. ನನ್ನ ಮತ್ತು ರಾಜನ ನಡುವಿನ ಸಂಬಂಧ ಆ ಲೇಖನದ ಪ್ರಧಾನ ವಿಷಯವಾಗಿತ್ತು. ರಾಜನಿಗೆ ನನ್ನೊಡನೆ ಬಹಳ ದ್ವೇಷವಿತ್ತೆಂದೂ, ನನ್ನ ಅನೈತಿಕ ನಡವಳಿಕೆ ಅದಕ್ಕೆ ಕಾರಣವೆಂದೂ ಅದರಲಿಲಿ ಬರೆಯಲಾಗಿತ್ತು. ಅದು ನನ್ನನ್ನು ಬಹಳ ನೋವಿಗೀಡುಮಾಡಿತು. ಅದನ್ನು ಓದಿದೊಡನೆ ನಾನು ಈಶ್ವರಯ್ಯರ ಬಳಿಗೋಡಿದೆ. ಅವರೂ ಕೂಡಾ ಈ ಲೇಖನವನ್ನೋದಿ ನನಗಾಗಿ ಕಾಯುತ್ತಿದ್ದರು. ಇದನ್ನು ನೋಡಿದೊಡನೆ ನಾನು ಅವರ ಬಲಿಗೋಡುವೆನೆಂದು ಅವರಿಗೆ ನಿಶ್ಚಯವಾಗಿತ್ತು. ಅವರ ಮುಂದೆ ಕುಳಿತು ನಾನು ಅಳಲಾರಂಭಿಸಿದೆ. ಈ ಲೇಖನದ ವಿರುದ್ಧ ನ್ಯಾಯಾಲಯದ ಮೊರೆ ಹೋಗಬೇಕೆಂದು ನಾನು ಅವರೊಡನೆ ಶಕ್ತಿಯುತವಾಗಿ ವಾದಿಸಿದೆ. ಆದರೆ ಅದರಿಂದೇನೂ ಪ್ರಯೋಜನವಿಲ್ಲವೆಂದು ಅವರೆಂದರು. ಈ ಲೇಖನದ ವಿರುದ್ಧ ಕೇಸು ಕೊಡುವುದರಿಂದ ಪ್ರತಿಕೂಲ ಪರಿಣಾಮ ಉಂಟಾಗಬಹುದೆಂಬುದು ಅವರ ಅಭಿಪ್ರಾಯವಾಗಿತ್ತು. ನಾನು ಅಸಂತೃಪ್ತನಾಗಿ ಅಡ್ವೊಕೇಟ್ ರಾಮಕುಮಾರರಲ್ಲಿಗೆ ಹೋದೆ. ಅವರದೂ ಕೂಡಾ ಈಶ್ವರಯ್ಯರದೇ ಅಭಿಪ್ರಾಯವಾಗಿತ್ತು. ಅವರು ನನ್ನನ್ನು ಸಂತೈಸಿದರು. | </p> |
| <p> | ಮರುದಿನ ಕೇರಳದ ಎರಡು ಪ್ರಮುಖ ಪಕ್ಷಗಳ ಪತ್ರಿಕೆಗಳ ಸಂಪಾದಕೀಯ ಪುಟಗಳಲ್ಲೂ ಈ ಲೇಖನ ಪ್ರಕಟಗೊಂಡಿತು. ಕಾಂಗ್ರೆಸ್ಸಿನ ಮುಖವಾಣಿಯಾದ ‘ವೀಕ್ಷಣಂ’ ಎಂಬ ಪತ್ರಿಕೆ ಮತ್ತು ಸಿಪಿ.ಐ. ಯ ಮುಖವಾಣಿಯಾದ ‘ಜನಯುಗ’ ಎಂಬುದು ಆ ಪತ್ರಿಕೆಗಳು. ಪ್ರಮುಖ ಪತ್ರಿಕೆಗಳಿಗೆ ಈ ರೀತಿ ಅಧಃಪತನ ಹೊಂದಲು ಸಾಧ್ಯವೆಂದು ನಾನೆಂದೂ ನಿರೀಕ್ಷಿಸಿರಲಿಲ್ಲ. ಹೆಚ್ಚು ತಡವಾಗದೆ ‘ವೀಕ್ಷಣಂ’ ಅಸ್ತಮಿಸಿತು. ‘ಜನಯುಗಂ’ ಕೊಂಚಕಾಲ ಸತ್ತಂತೆ ಬದುಕಿತು ಆ ಸಂದರ್ಭದಲ್ಲಿ ನನ್ನನ್ನು ಆಶ್ಚರ್ಯಚಕಿತನಾಗಿಸಿದ್ದು ಏಸುದಾಸನ ನಿಲುವಾಗಿತ್ತು. ಈತನನ್ನು ಒಂದು ರಾಷ್ಟ್ರೀಯ ಪಕ್ಷದ ವಕ್ತಾರನಾಗಿ ನಾನೆಂದೂ ಕಂಡಿರಲಿಲ್ಲ. ಇಷ್ಟು ಕೆಟ್ಟದಾಗಿ ಈತನು ಅಧಃಪತನ ಹೊಂದುವನೆಂದು ನಾನೆಂದೂ ಊಹಿಸಿರಲಿಲ್ಲ. ಎರಡೇ ಎರಡು ದಿನಗಳಲ್ಲಿ ಆತನ ಅಭಿಪ್ರಾಯದ ಬದಲಾವಣೆ ನನ್ನಲ್ಲಿ ಆಶ್ಚರ್ಯಾಘಾತವನ್ನುಂಟು ಮಾಡಿತ್ತು. ಅಂದು ಆತನು ಅದರ ಮೂಲಕ್ಕೆ ಬೆಳಕು ಚೆಲ್ಲಲು ಸಿದ್ಧನಾಗಲಿಲ್ಲ ಎನ್ನುವುದರಲ್ಲಿ ನನಗೆ ದುಃಖವಿಲ್ಲ. ಆದರೆ ಆತನಿಗೆ ತನ್ನ ನಿಷ್ಪಕ್ಷಪಾತ ತನವನ್ನು ಜನರ ಮುಂದಿಡಬಹುದಾಗಿತ್ತಲ್ಲ? ಅದರಿಂದ ಯಾರಿಗೂ ಯಾವ ನಷ್ಟವೂ ಉಂಟಾಗದು. ನಮ್ಮ ರಾಜಕೀಯ ಕ್ಷೇತ್ರದ ಮಾಲಿನ್ಯವನ್ನು ಶುದ್ಧೀಕರಿಸಲು ಅದು ಒಂದು ಚಿಕ್ಕ ರೀತಿಯಲ್ಲಾದರೂ ಸಹಕಾರಿಯಾಗುತ್ತಿತ್ತು. | </p> |
| <pic> | | </pic> |
| <p> | ಉಚ್ಛನ್ಯಾಯಾಲಯದ ತೀರ್ಪು ಹೊರಬಿದ್ದೊಡನೆ, ಆ ತೀರ್ಪಿನಲ್ಲಿ ರಾಜನನ್ನು ಪೊಲೀಸರು ಕೊಂಡೊಯ್ದು ಕಕ್ಕಯಂ ಕ್ಯಾಂಪಿನಲ್ಲಿ ಚಿತ್ರಹಿಂಸೆ ನೀಡಿದರೆಂದು ಹೇಳಿದ ಆಧಾರದಲ್ಲಿ ಕೇರಳ ಸರಕಾರ ಒಂದು ತನಿಖೆಗಾಗಿ | </p> |

| | | |
|---|---|---|
| | ಆದೇಶ ನೀಡಿತು. ರಾಜನನ್ನು ಪೊಲೀಸರು ಕಕ್ಕಯಂ ಕ್ಯಾಂಪಿನಲ್ಲಿರಿಸಿ ಚಿತ್ರಹಿಂಸೆ ನೀಡಿದ್ದಾರೆಂಬುದು ದೃಢಪಟ್ಟಿದ್ದರೂ ರಾಜನು ಈಗ ಪೊಲೀಸರ ಬಂಧನದಲ್ಲಿಲ್ಲವೆಂದೂ ತನಿಖೆ ಮುಂದುವರಿಯುತ್ತಿದೆಯೆಂದೂ ರಾಜ್ಯ ಸರಕಾರ ಶ್ರೇಷ್ಠ ನ್ಯಾಯಾಲಯಕ್ಕೆ ವರದಿಯೊಪ್ಪಿಸಿತು. ಇದಕ್ಕನುಸಾರವಾಗಿ ಆರೋಪಿಗಳಾದ ಉದ್ಯೋಗಸ್ಥರ ಹೆಸರಿನಲ್ಲಿ ಪ್ರೊಸ್ ಕ್ಯೂಷನ್ ಕ್ರಮ ಕೈಗೊಳ್ಳಬೇಕೆಂದೂ ಸುಳ್ಳು ಸತ್ಯವಾಙ್ಮೂಲ ನೀಡಿದ್ದಕ್ಕಾಗಿ ಎಲ್ಲರ ಹೆಸರಿನಲ್ಲೂ ನ್ಯಾಯಾಲಯ ಕ್ರಮ ಕೈಗೊಳ್ಳಬೇಕೆಂದೂ ಉಚ್ಛನ್ಯಾಯಾಲಯ ಆದೇಶ ನೀಡಿತು. ಇದರ ಪರಿಣಾಮವಾಗಿ ಎರಡು ಮೊಕದ್ದಮೆಗಳು ಮೇಲೆದ್ದವು. (1) ಅಪರಾಧಿಗಳಾದ ಪೊಲೀಸ್ ಅಧಿಕಾರಿಗಳ ಹೆಸರಿನಲ್ಲಿರುವ ಪ್ರೊಸ್ ಕ್ಯೂಷನ್ ಕೇಸು. (2) ಸುಳ್ಳು ಸತ್ಯವಾಙ್ಮೂಲ ನೀಡಿದುದರ ವಿರುದ್ಧವಾದಕ್ರಿಮಿನಲ್ ಮೊಕದ್ದಮೆಗಳಾಗಿದ್ದವು. | |
| <p> | ಈ ಎರಡು ಮೊಕದ್ದಮೆಗಳೂ ಕ್ರಿಮಿನಲ್ ಕೇಸುಗಳಾಗಿರುವುದರಿಂದ ಅವುಗಳನ್ನು ನಡೆಸುವ ಅಧಿಕಾರ ಸರಕಾರೀ ಪ್ರೊಸ್ ಕ್ಯೂಟರದಾಗಿತ್ತು. ಆದರೆ ಸರಕಾರೀ ಪ್ರೊಸ್ ಕ್ಯೂಟರ್ ಕೇಸು ನಡೆಸಿದರೆ ನ್ಯಾಯ ದೊರೆಯದೆಂದು ಮನವರಿಕೆಯಾಗಿರುವುದರಿಂದ, ಎಲ್ಲಾ ಮೊಕದ್ದಮೆಗಳಲ್ಲೂ ನಾನು ಸೂಚಿಸುವ ನ್ಯಾಯವಾದಿಗಳಿಂದ ಮೊಕದ್ದಮೆ ನಡೆಸಲು ಅನುಮತಿಸಬೇಕೆಂದು ಅಂದು ಮುಖ್ಯ ಮಂತ್ರಿಯಾಗಿದ್ದ ಏ.ಕೆ. ಆಚಿಟನಿಯವರಿಗೆ ಒಂದು ಮನವಿಯರ್ಪಿಸಿದೆ. ಹಾಗೆ ಅನುಮತಿ ನೀಡುವುದಾದರೆ ಅದರ ಎಲ್ಲಾ ಖರ್ಚುಗಳನ್ನೂ ನಾನೇ ವಹಿಸಿಕೊಳ್ಳುವೆನೆಂದೂ ಮನವಿಯಲ್ಲಿ ತಿಳಿಸಿದ್ದೆ. ಆದರೆ ನನಗೆ ಅದಕ್ಕೆ ಅನುಮತಿ ದೊರೆಯಲಿಲ್ಲ. ಅದರ ಫಲವಾಗಿ ನನ್ನ ಸಂದೇಹ ಬರೀ ಸಂದೇಹವಲ್ಲ ಎಂದು ನನಗೆ ಮನದಟ್ಟಾಯಿತು. | </p> |
| <p> | ಉಚ್ಛನ್ಯಾಯಾಲಯದ ನಿರ್ದೇಶನದಂತೆ ರಾಜನನ್ನು ನಿಯಮಕ್ಕೆ ವಿರುದ್ಧವಾಗಿ ಹಿಡಿದುಕೊಂಡು ಹೋಗಿ ಬಂಧನದಲ್ಲಿಟ್ಟು ಚಿತ್ರಹಿಂಸೆ ನೀಡಿ ಕೊಲೆ ಮಾಡಿದುದರ ವಿರುದ್ಧವಾಗಿ ಕೊಯಮತ್ತೂರಿನ ಜಿಲ್ಲಾ ನ್ಯಾಯಾಲಯದಲ್ಲೂ ಒಂದು ಮೊಕದ್ದಮೆ ಕೊಯಮತ್ತೂರಿಗೆ ವರ್ಗೀಯಿಸಲಾಯಿತು. ಜಯರಾಂ ಪಡಿಕ್ಕಲ್, ಲಕ್ಷ್ಮಣ, ಮೋಹನ, ಕುಂಞಿರಾಮನ್ ನಂಬ್ಯಾರ್, ಪುಲಿಕ್ಕೋಡನ್ ನಾರಾಯಣನ್ ಮೊದಲಾದವರು ಆರೋಪಿಗಳಾಗಿದ್ದರು. | </p> |

</body></text>
</Doc>